★★★

ಪ್ರೊಫೆಸರ್ ಕಳಿಸಿದ್ದ ಮೆಸೇಜು ಓಪನ್ ಮಾಡಿ ಮತ್ತೊಮ್ಮೆ ಓದಿದ. ಎಂಥಾ ಒಳ್ಳೆಯ ಸುದ್ದಿ. ಫೋನ್ ಸ್ಕ್ರೀನಿನ ಮೇಲೆ ನವಿರಾಗಿ ಬೆರಳುಗಳಿಂದ ಸವರಿದ. ಮೆಸೇಜು ಬಂದಾಗಿನಿಂದ ಅವ್ವನ ನೆನಪು ಗಾಢವಾಗುತ್ತಿದೆ. ಹಾಗೆ ನೋಡಿದರೆ ಅವ್ವ, ಅಜ್ಜ ನೆನಪಾಗದ ದಿನಗಳೇ ಇಲ್ಲ. ಅವ್ವನ ಹತ್ರ ಎಂದೋ ಆಡಿದ್ದ ಮಾತುಗಳು, ಈಗಷ್ಟೇ ಆಡಿದಂತೆ. ಅವಳು ಹೇಳುತ್ತಿದ್ದ ಎಚ್ಚರಿಕೆಯ ಮಾತುಗಳನ್ನು ಈಗತಾನೇ ಕೇಳಿಸಿಕೊಂಡಂತೆ. ಪ್ರತಿ ದಿನ, ಪ್ರತಿ ಕ್ಷಣ. ಪ್ರತಿ ಹೆಜ್ಜೆ ಎತ್ತಿ ಇಡುವಾಗ ಅವ್ವ, ಅಜ್ಜ ನಡೆದ ದಾರಿ ತೋರಿಸುತ್ತ ಎಚ್ಚರಿಸದಿದ್ದರೆ ಏನಾಗಿ ಬಿಡುತ್ತಿದ್ದೆನೊ?

'ಹೊತ್ತಾಯ್ತು ಮಗ, ಓದಿದ್ದು ಸಾಕು, ಸ್ಕೂಲಿಗೆ ಹೊರಡು. ಎರಡು ಮೈಲಿ ನಡೆಯಬೇಕಲ್ಲ. ಬಿಸಿಲು ಹೆಚ್ಚಾದರೆ ದಣಿವಾಗುತ್ತೆ. ತಗೋ ಬುತ್ತಿ. ಇವತ್ತು ರಾಗಿರೊಟ್ಟಿ ಜತೆಗೆ ಉಪ್ಪಿನಕಾಯಿ ಅಷ್ಟೇ. ನಾಳೆ ಮೊಸರನ್ನ ಕಟ್ಟಿಕೊಡ್ತೀನಿ. ಈ ದುಡ್ಡು ಇಟ್ಕೊ. ಹಸಿವಾದರೆ ಏನಾದರೂ ತಿನ್ನು. ಬರುವಾಗ ನಡಕೊಂಡೇ ಬಾ. ಆರೋಗ್ಯಕ್ಕೆ ಒಳ್ಳೆಯದು...' ಅಜ್ಜನಿಗೆ ನಮಸ್ಕಾರ ಮಾಡೋದು ಮರೆಯಬೇಡ ಅಂತ ಅವ್ವ ಆಗಾಗ ಹೇಳುತ್ತಲೇ ಇದ್ದಳಲ್ಲ.

ಕೆಲಸದ ಆರ್ಡರು ಬರೋದರೊಳಗೆ ಒಂದು ಸಲ ಊರಿಗೆ ಹೋಗಿಬರಬೇಕು. ಯೂನಿವರ್ಸಿಟಿಗೆ ಮೊದಲನೆಯವನಾಗಿ ಪಾಸಾದ ವಿಷಯ ಮತ್ತು ಫೋಟೊ ಸಮೇತ ಪತ್ರಿಕೆಗಳಲ್ಲಿ ಬಂದಾಗಲೇ ಊರಿಗೆ ಹೋಗಬೇಕಿತ್ತು ಅಂತ ಅನ್ನಿಸಿತ್ತು. ಆದರೆ, ಹೋಗಲು ಆಗಿರಲಿಲ್ಲ. ಯಾರಿದ್ದಾರೆ ಊರಲ್ಲಿ? ವರ್ಷದ ಹಿಂದೆ ಸುರಿದ ಮಳೆಗೆ ಮನೆ ಬಿತ್ತೆಂಬ ಸುದ್ದಿ ಗೊತ್ತಾದ ಮೇಲೆ ಅವನ ಕರುಳಬಳ್ಳಿ ಮತ್ತೆ ಕತ್ತರಿಸಿದಂತಾಗಿತ್ತು. ಈಗ ಹೋಗಿ, ಬಿದ್ದ ಮನೆಯನ್ನಾದರೂ ನೋಡಿ ಬರಬೇಕು. ಬಿದ್ದಿರೊ ಮನೆಯಲ್ಲಿ ಅವ್ವ, ಅಪ್ಪನ ಹೆಜ್ಜೆ ಕುರುಹುಗಳನ್ನು ಹುಡುಕಬೇಕು ಅನ್ನಿಸಿತು.

ಹೊಲಗಳಲ್ಲಿ ದುಡಿಯುವಾಗ ನಡುಬಗ್ಗಿಸಿ, ಊರವರ ಎದುರು ಸ್ವಾಭಿಮಾನಿಯಾಗುತ್ತಿದ್ದ ಅವ್ವನ ಹೆಜ್ಜೆ ಗುರುತುಗಳನ್ನು ಎಲ್ಲಿ ಅಂತ ಹುಡುಕುವುದು? ಅವ್ವ, ಹೆಜ್ಜೆ ಇಡದ ದಾರಿಗಳು

